ಶತಮಾನ 2015, ತನ್ನ ಶಿರೋನಾಮೆಯಿಂದಲೇ ಸಮಾಜದಲ್ಲಿ ಹೆಣ್ಣಿನ ಪಾತ್ರಕ್ಕೆ ಒತ್ತುಕೊಡುವುದು ಹಾಗೂ ಪ್ರಬಲವಾದ ಭವಿಷ್ಯವನ್ನು ಗುರುತಿಸುವುದನ್ನು ಸೂಚಿಸುತ್ತದೆ. ಶತಮಾನ 2015ರ ಭಾಧ್ಯತೆಗಳು ಕೆಳಕಂಡಂತಿವೆ.

1) ಸಮಾಜದಲ್ಲಿ ಹೆಣ್ಣಿನ ನಿರ್ಣಾಯಕ ಪಾತ್ರಕ್ಕೆ ಮಹತ್ವ ಕೊಡುವುದು.
2) ಪರ್ಯಾಯ ಭವಿಷ್ಯವನ್ನು ಕಟ್ಟುವ ಅವರ ಸಾಮರ್ಥ್ಯವನ್ನು ಗುರುತಿಸುವುದು.
3) ಮಹಿಳೆಯ ವಿಶಿಷ್ಟವಾದ ಯೋಗ್ಯತೆ, ಮಧ್ಯಸ್ಥಿಕೆ ವಹಿಸುವ ಗುಣ, ಎಲ್ಲಾ ಹಂತಗಳಲ್ಲೂ ಒಂದುಗೂಡಿ ಕೆಲಸ ಮಾಡುವುದು.
4) ಸ್ವಾಭಾವಿಕ ದುರಂತಗಳನ್ನು ಹಾಗೂ ಮಾನವ ಸಹಜ ಘರ್ಷಣೆಗಳನ್ನು ಎದುರಿಸುವ ಎದೆಗಾರಿಕೆ ಮತ್ತು ಮಹಿಳೆಯರಲ್ಲಿ ಒಗ್ಗಟ್ಟನ್ನು ಮೂಡಿಸುವುದು, ಇವುಗಳು ಸ್ತ್ರೀಯರ ವಿಶೇಷ ಸಾಮರ್ಥ್ಯಗಳು.

ಶತಮಾನ 2015ರಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಎಲ್ಲಾ ಮಹಿಳೆಯರು, ತಮ್ಮ ಕೆಲಸ ಮತ್ತು ಚಟುವಟಿಕೆಗಳನ್ನು ಹಂಚಿಕೊಳ್ಳುವುದರ ಮೂಲಕ, ಸತತವಾಗಿ ಪಾಲ್ಗೊಳ್ಳುತ್ತಾರೆ. ಸಂಪರ್ಕಗಳ ಮೂಲಕ ಎಲ್ಲಾ ಹಂತಗಳಲ್ಲೂ ಕೆಲಸ ಮಾಡುವುದು ತುಂಬಾ ಅವಶ್ಯಕವೆಂದು – ಅಂದರೆ ಸ್ಥಳೀಯವಾಗಿ ಭಾರಿ ದುರಂತಗಳನ್ನು ಎದುರಿಸುವುದು, ರಾಷ್ಟ್ರಮಟ್ಟದಲ್ಲಿ ಅವಶ್ಯಕತೆಗಳನ್ನು ಹಂಚಿಕೊಳ್ಳುವಿಕೆ ಹಾಗೂ ಭೂಮಂಡಲದಲ್ಲಿ ಇರತಕ್ಕಂತಹ ಮತ್ತು ಬೆಳೆಯುತ್ತಿರುವ ಪ್ರಾಪಂಚಿಕ ಸಂಪರ್ಕಗಳ ಬಗ್ಗೆ ಮಹಿಳೆಯರು ರುಜುವಾತು ಮಾಡುತ್ತಾರೆ. ಶತಮಾನ 2015, ಮುಂದುವರೆದ ಸಂಪರ್ಕಗಳ ಮೂಲಕ ಪ್ರಪಂಚದಾದ್ಯಂತ ಮಹಿಳೆಯರ ಪಾತ್ರಗಳು ಸ್ಪಷ್ಟವಾಗಿ ಗೋಚರಿಸುವಂತೆ ಅವಕಾಶಗಳನ್ನು ಕಲ್ಪಿಸುತ್ತದೆ.

ಮಹಿಳೆಯರು ಪ್ರಪಂಚದ ಅನೇಕ ಭಾಗಗಳಲ್ಲಿ ಯಾವ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರೋ ಅವು, ವಿಶಾಲ ಸಂಪರ್ಕ ಜಾಲದಿಂದ ಬಲಗೊಳ್ಳುತ್ತವೆ.

ಮಹಿಳೆಯರು, ಶತಮಾನ 2015ರಲ್ಲಿ ವಿವಿಧ ಹಿನ್ನೆಲೆ, ಸಾಮಾಜಿಕ ಸಂಸ್ಕೃತಿ ಹಾಗೂ ಕಾರ್ಯಮಗ್ನತೆಗೆ ಸೇರಿದವರಾಗಿರುತ್ತಾರೆ. ತಮ್ಮ ಪಾತ್ರಗಳನ್ನು ಸಮಾಜದ ಮುಂದಿಡಲು, ಅವರವರ ಪಾತ್ರಗಳಿಗೆ ತಕ್ಕಂತೆ ಪರ್ಯಾಯ ಭವಿಷ್ಯತ್ತನ್ನು ರೂಪಿಸುವ ಸಾಮಾನ್ಯ ಅರಿವಿನಿಂದ ಅವರೆಲ್ಲರೂ ಒಗ್ಗೂಡುತ್ತಾರೆ.

ಈ ಕಾರ್ಯ ಇಡೀ ಜಗತ್ತಿಗೆ ಸಂಬಂಧಿಸಿದ್ದು, ಇದು ಜಗತ್ತನ್ನು ಆವರಿಸಿಕೊಂಡಿರುವ ಜಾಲ. ಇದು ಮಹಿಳೆಯರಲ್ಲಿ ರೂಢಿಯಲ್ಲಿರುವಂತಹುದು ಹಾಗೂ ವಿರೋಧಗಳು ಮತ್ತು ಅವಿರೋಧಗಳನ್ನು ಗುರಿ ಸಾಧಿಸುವತ್ತ ಬಳಸಿಕೊಳ್ಳುವುದರೆಡೆಗೆ ಗಮನ ಹರಿಸುತ್ತದೆ. ಸಾಮಾಜಿಕ ನಿರೂಪಕಿಯಾಗಿ ಮಹಿಳೆ ಸಾಕಷ್ಟು ಬದಲಾವಣೆಗಳಿಗೆ ಕಾರಣಗಳಾಗಬಲ್ಲಳು. ಸಾಮಾನ್ಯ ನಂಬುಗೆಯಂತೆ ಅವಳನ್ನು ಬಲಿಪಶು ಎಂದು ಪರಿಗಣಿಸಲಾಗದು. ಅವಳ ಪಾತ್ರವನ್ನು ಗುರುತಿಸಬೇಕಷ್ಟೆ.

ಶತಮಾನ 2015, ಮಹಿಳೆಯರಿಗೂ ಹಾಗೂ ಜಗತ್ತಿಗೂ ಮಹಿಳೆಯರು ಹೆಚ್ಚು ಮಾನವೀಯ ಮತ್ತು ಹಂಚಿಕೊಳ್ಳುವ ಸಮುದಾಯವನ್ನು ಹುಟ್ಟುಹಾಕಲು ಸಮರ್ಥರು ಎಂದು ತೋರಿಸಿಕೊಡುತ್ತದೆ.

ಇಲಿಯೋನೋರ ಬಾರ್‌ಬೇರಿ ಮಾಸಿನಿ<br>ಜನವರಿ 2010

ಇಲಿಯೋನೋರ ಬಾರ್‌ಬೇರಿ ಮಾಸಿನಿ, ರೋಮ್‌ನಲ್ಲಿರುವ ಗ್ರೆಗೋರಿಯನ್ ವಿಶ್ವವಿದ್ಯಾನಿಲಯದ ಸಮಾಜ ವಿಜ್ಞಾನ ವಿಭಾಗದ, ನಿವೃತ್ತ ಪ್ರಾಧ್ಯಾಪಕರು; ಕ್ಲಬ್ ಆಫ್ ರೋಂನ ಗೌರವಾರ್ಥ ಸದಸ್ಯರು. ಅನೇಕ ಅಂತರಾಷ್ಟ್ರೀಯ ಸಂಸ್ಥೆಗಳಿಗೆ ಸಲಹೆಗಾರರು. ಉದಾಹರಣೆ:- ಯುನೆಸ್ಕೊ ಮತ್ತು ಯು.ಎನ್.ಡಿ.ಪಿ.
ಮಿಲ್ಲನಿಯ 2015 ಸ್ಟೀರಿಂಗ್ ಕಮಿಟಿಯ ಸದಸ್ಯರು.
(www.millennia2015.org/EleonoraMasini)